ಎಲ್ರೂ ಅವರಿಗೆ ಒತ್ತಾಯ ಮಾಡ್ತಿದಾರಂತೆ. ಇದು ಸರೀನಾ, ತಪ್ಪಾ?'

'ಹೊಸ ಅಮ್ಮಂಗೆ ಮಲತಾಯಿ ಅಂತಾರೆ ಅಲ್ವಾ? ಅಮ್ಮ ಧ್ರುವನ ಕತೆ ಹೇಳ್ತಿದ್ಲಲ್ಲ?'

'ಹೂಂ...'

'ಪಾಪ, ಧ್ರುವ...'

'ಪಾಪ ಅಂತೀಯಾ? ಅವನು ಧ್ರುವ ನಕ್ಷತ್ರ ಆಗಿ ಹೋಳೀತಿದಾನಲ್ಲ?'

'ಆದ್ರೂ ಕಷ್ಟ ಅಲ್ವಾ ಅಕ್ಕ? ಅಪ್ಪನ ತೊಡೆ ಮೇಲೆ ಕೂತೋನನ್ನ ಎಳೆದು ಹಾಕೋಕೆ ಈ ಮಲತಾಯಿ ಯಾರು? ಅವನೂ ಮಗ ಅಲ್ವಾ?'

'ಅವಳೇನೋ ಎಳೆದು ದೂಡಿದ್ಲು. ಅಪ್ಪ ಅನ್ನಿಸ್ಕೊಂಡೋನು ತಡೀಬಹುದಿತ್ತಲ್ವಾ? ಇದು ಸರಿಯಲ್ಲ ಅಂತ ಅವನ್ಯಾಕೆ ಬುದ್ಧಿ ಹೇಳ್ಲಿಲ್ವೋ?'

'...'

'ಹೆಂಡತಿ ಇದ್ದ ಹಾಗೇ ಮತ್ತಷ್ಟು ಜನರನ್ನ ಮದುವೆಯಾಗೋ ರಾಜರ ಕತೆ ಒಂಥರ. ಹೆಂಡತಿ ಸತ್ತ ಮೇಲೆ ಆಗೋದು ಮತ್ತೊಂಥರ. ಮಕ್ಕಳಿದ್ರಂತೂ ದೇವ್ರೇ ಗತಿ. ಆ ಕಡೆ ಅಮ್ಮಾನೂ ಇಲ್ಲ, ಈ ಕಡೆ ಅಪ್ಪಾನೂ ಇಲ್ಲ...'

'ಇನ್ನೊಂಚೂರು ಲಿಂಬೆರಸ ಹಾಕೇ. ಹುಳಿಹುಳಿಯಾಗಿದ್ರೆ ಚೆನ್ನಾಗಿರುತ್ತೆ.'

'ನಿನ್ನ ಹೊಟ್ಟೆ ಒಡಿಯ. ನೀನಿನ್ನೂ ಚಿತ್ರಾನ್ನದಲ್ಲೇ ಇದ್ದಿ. ನಾ ಹೇಳಿದ್ದು ನಿನ್ನ ಕಿವಿಗೆ ಬಿತ್ತೋ ಇಲ್ವೋ?'

'ನೀ ಕೇಳಿದ್ದಕ್ಕೆ ಉತ್ತರ ಕೊಡ್ಲಿಲ್ವಾ ನಾನು?'

'ಏನು ಕೇಳ್ದೆ ಹೇಳು'

'ನಿನ್ನ ಫ್ರೆಂಡ್ ಅಪ್ಪ ಮತ್ತೊಂದು ಮದುವೆ ಆಗೋದು ಸರೀನಾ, ತಪ್ಪಾ ಅಂತ...'

'ಹೂಂ ಹೇಳು, ಸರೀನಾ, ತಪ್ಪಾ?'

ತಿಂಡಿ ತಿನ್ನಲು ಸ್ಟೀಲ್ ತಟ್ಟೆ ತೆಗೆದ ಹುಡುಗ ಅದ್ರಲ್ಲಿದ್ದ ನೀರಿನ ಪಸೆಯನ್ನು ಅಂಗಿ ತುದಿಯಿಂದ ವರೆಸಿಕೊಳ್ಳುತ್ತಾ ನಿರಾಳವಾಗಿ ಹೇಳಿದ,

'ಯಾರು ಏನಾದ್ರೂ ಮಾಡ್ಕೊಳ್ಲಿ ಕಣೇ. ನಮ್ಮಪ್ಪ ಅಂತೂ ಇನ್ನೊಂದು ಮದುವೆ ಮಾಡ್ಕೊಳ್ಳಲ್ಲ. ನಮಗೆ ಮಲತಾಯಿ ಬರಲ್ಲ...'

'ಭವಿಷ್ಯ ಹೇಳೋಕೆ ಗೊತ್ತಾ ನಿಂಗೆ?'

'ಏ, ಅಪ್ಪನ್ನ ನೋಡಿದ್ರೆ ಗೊತ್ತಾಗಲ್ವೇನೇ? ಇಷ್ಟೊಳ್ಗೇ ಅಪ್ಪ ಮತ್ತೆ ಮದುವೆ ಮಾಡ್ಕಂತಾರಾ?'

'ಮಾಡ್ಕಂಡ್ರೆ?'

'ಮಾಡ್ಕಂಡ್ರೆ' ತಲೆ ಕೆರೆದುಕೊಂಡ ಭಾರ್ಗವ, 'ಯಾಕೆ ಮಾಡ್ಕಂತಾರೆ? ಖಂಡಿತಾ ಇಲ್ಲ...'

ಗಲಗಲ ತಲೆ ಅಲುಗಾಡಿಸಿದ ಹುಡುಗ. ಭಾಮನಿಗೆ ಸಮಾಧಾನವಾಯ್ತು. ತಮ್ಮನ ಬಾಯಲ್ಲಿ ಮಚ್ಚೆ ಇದೆ ಅಂತ ಹೇಳುತ್ತಿದ್ದಳು ಅಮ್ಮ. ಅಂತೋರು ಹೇಳಿದ್ದು ಸತ್ಯ ಆಗುತ್ತಂತೆ. ಇವಳೂ ಅವನ ನಾಲಿಗೆ ಹೊರ ಚಾಚಲು ಹೇಳಿ ನೋಡಿದ್ದಾಳೆ. ಕಡಲೇಬೇಳೆಯಷ್ಟಗಲದ ಕಂದು ಬಣ್ಣದ ಮಚ್ಚೆ ಅವನ ನಾಲಿಗೆಯಲ್ಲುಂಟು. ಅದರ ನೆನಪಿಂದ ಮನಸ್ಸು ಮತ್ತಷ್ಟು ಹಗುರವಾಯ್ತು.

'ಅಪ್ಪ ಮತ್ತೊಂದು ಮದುವೆ ಮಾಡ್ಕಳಲ್ಲ ಅಂತ ಇನ್ನೊಂದ್ಸತಿ ಹೇಳೋ. ನಿನ್ನ ನಾಲಿಗೇಲಿ ಮಚ್ಚೆ ಉಂಟಲ್ಲ...' ಎನ್ನುತ್ತಾ ಅವನ ತಟ್ಟೆ ತುಂಬಾ ಚಿತ್ರಾನ್ನ ಬಡಿಸಿದಳು ಭಾಮ.

'ಹೇಳ್ಲಿಲ್ವೇನೇ? ಖಂಡಿತಾ ಮಾಡ್ಕಳಲ್ಲ...'

'ತಡಿ, ಇವತ್ತು ನಿಂಗೆ ಪಾಯಸ ಮಾಡ್ಕೊಡ್ತೀನಿ' ಅಕ್ಕ ತನ್ನ ತಮ್ಮನೊಂದಿಗೆ ಏಕಾಂತದಲ್ಲಿ ನಡೆಸಿದ ಈ ಆಪ್ತ ಸಂಭಾಷಣೆ ಚಿದಾನಂದನ ಕಿವಿಗೆ ಬಿದ್ದಿದ್ದು ಒಂದು ಯೋಗಾಯೋಗ. ಸಿನಿಮಾದಲ್ಲಿ ನಡೆಯುವಂತಾದ್ದು ನಿಜಜೀವನದಲ್ಲೂ ನಡೆಯಬಹುದು ಎನ್ನುವುದಕ್ಕೆ ನಿದರ್ಶನ. ಇಲ್ಲದಿದ್ದರೆ ಅವನು ಟವೆಲ್ ಮರೆತು ಬಚ್ಚಲಿಗೆ ಹೋಗಬೇಕಿತ್ತಾ? ಹೋಗಿದ್ದರೂ ಯಾರನ್ನಾದರೂ ಕರೆದು ಟವೆಲ್ ತಂದುಕೊಡಲು ಹೇಳದೆ ಸ್ವತಃ ಈಚೆಗೆ ಬರಬೇಕಿತ್ತಾ? ಬಂದರೂ ಮಕ್ಕಳ ಮಾತುಕತೆಗೆ ಕಿವಿಯಾಗುವ ಪ್ರಸಂಗ ಸೃಷ್ಟಿಯಾಗಬೇಕಿತ್ತಾ? ವಿಧಿ ಅನ್ನುವುದು ಮನುಷ್ಯರ ಬಾಳಿನಲ್ಲಿ ಯಾವ ರೀತಿ ಹೊಂಚು ಹಾಕಿ ಆಟವಾಡುತ್ತದೆಯೋ ಯಾರು ಬಲ್ಲರು? ಮಗಳ ಮನಸ್ಸು ಯಾವ ದಿಕ್ಕಿನಲ್ಲಿ ಓಡುತ್ತಿದೆ ಎಂದು ಚಿದಾನಂದನಿಗೆ ಅರ್ಥವಾಗಿತ್ತು. ಅವಳ ಫ್ರೆಂಡ್ ಅಪ್ಪ ಆದವನು ಯಾರು ಎಂದು ಗೊತ್ತಾಗಿತ್ತು. ಅಂದರೆ ಮಗಳು ಆ ದಿನ ಎಲ್ಲವನ್ನೂ ಕೇಳಿಸಿಕೊಂಡಿದ್ದಾಳೆ. ಕೇಳಿಸಿಕೊಂಡಿಲ್ಲ ಎನ್ನುವುದು ತನ್ನ ಭ್ರಮೆ. ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಿತ್ತಾ ಹುಡುಗಿ? ಅರಿತೂ ಅರಿಯದ ವಯಸ್ಸಿನ ತನ್ನ ತಬ್ಬಲಿ ಮಕ್ಕಳ ಕುರಿತು ಚಿದಾನಂದ ಎಷ್ಟು ಭಾವುಕನಾದ, ಆರ್ದ್ರನಾದ ಅಂದರೆ ತೂಗಾಡುತ್ತಿದ್ದ ಮನಸ್ಸು ಸ್ಥಿರವಾಗಿ ನಿಂತಿತು. ಅಮ್ಮ ಸತ್ತರೆ ಅಪ್ಪ ಮತ್ತೊಂದು ಮದುವೆಯಾಗುವುದು ಲೋಕದ ಕಣ್ಣಲ್ಲಿ ಅಸಹಜವಲ್ಲ. ಅಪ್ಪ ಸತ್ತು ಅಮ್ಮ ಮತ್ತೊಂದು ಮದುವೆಯಾಗುವ ಪ್ರಸಂಗ ಬಂದರೆ? ಅದರಲ್ಲೂ ಮಕ್ಕಳಿರುವವಳಾಗಿದ್ದರೆ? ಕಾಲ ಎಷ್ಟೇ ಬದಲಾಗಿದೆ ಅಂದುಕೊಂಡರೂ ಅಮ್ಮನಾದವಳಿಗೆ ಈ ನಿರ್ಧಾರ ತೆಗೆದುಕೊಳ್ಳಲು ಕಷ್ಟವಾಗುತ್ತದೆ ಅಂದಿತು ಅವನ ಅಂತರ್ಯ. ಮತ್ಯಾತಕ್ಕಲ್ಲ, ಮಕ್ಕಳ ಭವಿಷ್ಯದ ಕುರಿತಾದ ಸ್ವಾಭಾವಿಕ ಆತಂಕದಿಂದ. ಹೆಣ್ಣು ಮಕ್ಕಳಲ್ಲಿ ಸ್ವಭಾವ ಸಹಜವಾಗಿರುವ ಈ ಆತಂಕ ಗಂಡಸರಲ್ಲಿ ಕಮ್ಮಿಯಿರುತ್ತದೆಯೇ? ಗಂಡಸರಷ್ಟು ಬೇಗ ಅವರು ತೀರ್ಮಾನಕ್ಕೆ ಬರುವುದಿಲ್ಲವೇ? ಇರಬಹುದೇನೋ.

***

ಸುನಂದೆಯ ತಮ್ಮ ತಿಂಗಳು ಕಳೆಯುವಷ್ಟರಲ್ಲಿ ಮತ್ತೊಮ್ಮೆ ಹಾಜರಿ ಹಾಕಿದ, ಒಂದು ಭಾನುವಾರದ ದಿನ ಬೆಳಿಬೆಳಿಗ್ಗೆ. ಈ ಸಲ ಕರಿದ ತಿಂಡಿಯ ಗಂಟು ಬಂದಿರಲಿಲ್ಲ. ಬದಲಿಗೆ ತಮ್ಮ ತೋಟದಲ್ಲಿ ಬೆಳೆದ ಹಣ್ಣುಗಳು. ಸೀಬೆ, ಪನ್ನೇರಲ, ಬಾಳೆಹಣ್ಣುಗಳ ಜೊತೆ ಕರಿಬೇವಿನ ದೊಡ್ಡ ಕಂತೆ. ತಮ್ಮನ ನಾಲಿಗೆ ಚಪಲ ತೀರಿಸಲು ಪಲಾವು ಮಾಡಿದ್ದಳು ಭಾಮ. ತಿಂಡಿಯ ಟೇಬಲ್ಲಿಗೆ ಬಂದು ಕೂತ ಮಾವನಿಗೆ ಅಚ್ಚರಿ.

'ಪರ್ವಾಗಿಲ್ವೇ ನಮ್ಮ ಹುಡುಗಿ. ಫಸ್ಟ್ ಕ್ಲಾಸಾಗಿ ತಿಂಡಿ ಮಾಡೋಕೆ ಕಲ್ತಿದಾಳೆ.'

'ಏನಂದ್ಕಂಡಿದ್ದಿ ನನ್ನ ಮಗಳನ್ನ? ಅಮ್ಮನ ಪಡಿಯಚ್ಚು' ಚಿದಾನಂದ ತಾರೀಫು ಮಾಡಿದ. ಇಂಥ ಯಾವ ಮಾತುಗಳಿಗೂ ಅರಳದಷ್ಟು ಭಾಮನ ಮನಸ್ಸು ಮುದುಡಿಕೊಂಡಿತ್ತು. ದೊಡ್ಡಕ್ಕೆ ಬಂದುಬಿಟ್ಟ ಸೋದರಮಾವ. ನಮ್ಮನ್ನು ನಮ್ಮಷ್ಟಕ್ಕೆ ಇರಲು ಬಿಡದೆ ಅಪ್ಪನ ಮನಸ್ಸನ್ನು ತಿರುಗಿಸಿಯೇ ಸಿದ್ಧ ಅನ್ನುವಂತೆ ಜಬರ್ದಸ್ತಾಗಿ ಮಾತಾಡುತ್ತಾ, ನಗಾಡುತ್ತಾ, ಅಕ್ಕ ಸತ್ತಿದ್ದು ಮರೆತೇ ಹೋಗಿದೆಯಾ? ಇಷ್ಟು ಬೇಗ? ಈ ಸಲ ತಿಂಡಿಯ ಕಲಾಪ ಮುಗಿದು ಏಕಾಂತ ಸಾಧಿಸಲು ಚಿದಾನಂದ ಆಸ್ಪದ ಕೊಡಲಿಲ್ಲ.

'ಮತ್ತೇನಪ್ಪಾ ಗ್ರಾಸ್ತ, ಹೀಗೆ ಹೋದೋನು ಹಾಗೆ ಬಂದ್ಬಿಟ್ಟಿದೀಯಾ? ಸಿಟೀಲಿ ಏನಾರೂ ಕೆಲಸ ಉಂಟಾ?'

'ನೆಂಟ್ರನ್ನ ಹೀಗೆ ವಿಚಾರಿಸ್ಕೊಳ್ಳೋದಾ ಬಾವ?'

'ನೀನ್ಯಾವ ನೆಂಟ ಮಾರಾಯಾ? ನಮ್ಮನೆಯೋನೇ...'

'ಸಿಟೀಲಿ ಕೆಲಸ ಇದ್ರೆ ಇಲ್ಲೀವರೆಗೆ ಬರಬೇಕಾ? ನಮ್ಮೂರಿನ ಹತ್ರಾನೂ ಇಲ್ವಾ ಪೇಟೆ?'

'ತಮಾಷಿಗೆ ಕೇಳ್ದೆ ಮಾರಾಯಾ...'

'ನಾನೂ ತಮಾಷಿಗೆ ಹೇಳಿದ್ದು...'

ಮುಂದಿನ ಮಾತಾಡಲು ಕೊಂಚ ಹಿಂದೆ ಮುಂದೆ ನೋಡಿದ ಬಾವನೆಂಟ. ಅವನು ಯಾಕೆ ಬಂದಿದ್ದೆಂದು ಗೊತ್ತಿಲ್ಲವಾ ಚಿದಾನಂದನಿಗೆ? ಸತ್ಯಭಾಮನಿಗೆ? ಅವನು ಉಗುಳು ನುಂಗಿಕೊಂಡಿದ್ದು ನೋಡಿ ನೇರವಾಗೇ ಕೇಳಿದ ಚಿದಾನಂದ, ಮಕ್ಕಳ, ಅದರಲ್ಲೂ ಮಗಳ ಸಮಕ್ಷಮದಲ್ಲಿ ಎಲ್ಲಾ ತೀರ್ಮಾನವಾಗಿಬಿಡಲಿ ಎನ್ನುವ ಉದ್ದೇಶದಿಂದೆಂಬಂತೆ,

'ಸುಮ್ಸುಮ್ನೆ ನೀನು ಕೆಲಸಕಾರ್ಯ ಬಿಟ್ಟು ಬರೋನಲ್ಲ ಅಂತ ಗೊತ್ತಿದೆ ನಂಗೆ. ಏನೋ ಉದ್ದೇಶ ಇಟ್ಕೊಂಡೇ ಬಂದಿರ್ತಿ...'

'ಮತ್ತೆ ತಮಾಷಿ ಮಾಡ್ತಿದೀರಿ. ಅವತ್ತು ಬಂದಾಗ ಹೇಳಿರ್ಲಿಲ್ವಾ ನಾನು? ಏನು ಯೋಚನೆ ಮಾಡಿದ್ರಿ ಅಂತ ಕೇಳ್ಕೊಂಡು ಹೋಗೋಕೆ ಬಂದೆ. ಎಲ್ಲಾ ಒಪ್ಪಿಗೆ ಅಂತಾದ್ರೆ ಮುಂದಿನ ವ್ಯವಸ್ಥೆ ಮಾಡ್ಕಂಬೇಕಲ್ಲ?'

ಅಡುಗೆ ಮನೆಯಲ್ಲಿದ್ದ ಭಾಮನ ಕಾಲುಗಳು ಕಂಪಿಸುತ್ತಿದ್ದುವು. ಇನ್ನೊಂದು ಕ್ಷಣದಲ್ಲಿ ತನ್ನ, ತನ್ನ ಮುಗ್ಧ ತಮ್ಮನ ಭವಿಷ್ಯ ನಿರ್ಧಾರವಾಗುವ ಉತ್ತರ ಬಂದುಬಿಡುತ್ತದೆ. ಮಲತಾಯಿ ಒಳ್ಳೆಯವಳೇ ಆಗಿರಲಿ, ಸ್ವಂತ ಅಮ್ಮ ಆಗಲು ಸಾಧ್ಯವೇ? ಲೋಕ ಕಂಡರಿಯದಿದ್ದರೂ ಅಸಾಧ್ಯ ಅನ್ನುತ್ತಿದೆ ಹುಡುಗಿಯ ಒಳ ಮನಸ್ಸು. ಭಾಮನ ಎದೆಬಡಿತ ಅವಳಿಗೇ ಕೇಳಿಸುವಷ್ಟು ಆಚೆ ನಿಶ್ಶಬ್ಧ.

ಒಮ್ಮೆ ಮಾತಾಡಬಾರದೇ ಈ ಅಪ್ಪ? ಇಷ್ಟೊಂದು ಮೀನಾಮೇಷ ಯಾಕೆ?

'ಮೊಸರು ಬಜ್ಜಿ ಹಾಕ್ಕೊಳ್ಳೋ' ಅನ್ನುತ್ತಿದ್ದಾರೆ ಅಪ್ಪ. ಮಾವನಿಗೆ ಮೈ ಪರಚಿಕೊಳ್ಳುವಂತಾಗಿರಬೇಕು.

'ನನ್ನ ಪ್ರಶ್ನೆಗೆ ಇದು ಉತ್ತರ ಅಲ್ಲ' ಕೊಂಚ ಖಾರವಾಗೇ ಬಂತು ಪ್ರತಿಕ್ರಿಯೆ.

'ಆಯ್ತಪ್ಪಾ, ಏನಂತಿದ್ದಿ ನೀನು? ಮುಂದಿನ ವ್ಯವಸ್ಥೆ ಬಗ್ಗೆ ಅಲ್ವಾ?'

'...'

(ಸಶೇಷ)